ರಾಜ್ಯ ಕ್ರೀಡಾ ಶಾಲೆಗಳ ಬಗ್ಗೆ

೬೯೫ ಶ್ರೀಮತಿ ಸುಮಾವಸಂತ್ (ವೀರಾಜಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಎಷ್ಟು ಕ್ರೀಡಾ ಶಾಲೆಯನ್ನು ತೆರೆಯಲಾಗಿದೆ ? ಮತ್ತು ಎಲ್ಲೆಲ್ಲಿ ತೆರೆಯಲಾಗಿದೆ ?

ಆ) ಈ ಶಾಲೆಗಳಲ್ಲಿ ಗ್ರಾಮೀಣ ಮತ್ತು ಪಟ್ಟಣಗಳಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ಈ ಕ್ರೀಡಾ ಶಾಲೆಗೆ ಸೇರಲು ಗೊತ್ತುಪಡಿಸಿರುವ ಅರ್ಹತೆ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಕೊಡಗು ಜಿಲ್ಲೆಯ ಕೂಡಿಗೆ ಗ್ರಾಮದಲ್ಲಿ ಮಾತ್ರ ಒಂದು ಕ್ರೀಡಾ ಶಾಲೆಯನ್ನು ಪ್ರಾರಂಭಿಸಲಾಗಿದೆ.

ಆ) ಗ್ರಾಮೀಣಗಳಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ ೩೯, ಪಟ್ಟಣಗಳಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ ೫೬, ಒಟ್ಟು ೯೫

ಇ) ೧) ವಿದ್ಯಾರ್ಥಿಗಳ ವಯಸ್ಸು ೧೫ ವರ್ಷಗಳಿಗೆ ಕಡಿಮೆ ಇದ್ದು. ೮ನೇ ತರಗತಿಗೆ ಸೇರಲು ಅರ್ಹತೆ ಹೊಂದಿರಬೇಕು.

೨) ಜಿಲ್ಲಾ ಮತ್ತು ರಾಜ್ಯ ಮಟ್ಟದ (ಶಾರೀರಿಕ, ಬರವಣಿಗೆ ಮಂತ್ರ ವೈದ್ಯಕೀಯ) ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು.

ಸಾರಾಯಿ ಕುಡಿತದ ಬಗ್ಗೆ

೬೨೨ (ಬಿ) ಶ್ರೀ ಆರ್. ಎನ್. ನಾಯಕ್ (ಭಟಕಳ್).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ಗುತ್ತಿಗೆದಾರರ ಮೂಲಕ ಜನರಿಗೆ ಮಾರುವ ಸಾರಾಯಿಯಲ್ಲಿ ಇರತಕ್ಕ ಪೌಷ್ಟಿಕಾಂಶದ ಬಗ್ಗೆ ಆರೋಗ್ಯ ಖಾತೆ ಏನಾದರೂ ಮಾಹಿತಿ ಸಂಗ್ರಹಿಸಿದೆಯೇ ? ಹಾಗಿದ್ದಲ್ಲಿ ಅದರಲ್ಲಿ ಇರತಕ್ಕ ಪೌಷ್ಟಿಕಾಂಶಗಳು ಯಾವುವು ?

ಆ) ಹಾಗಿದ್ದಲ್ಲಿ ಆರೋಗ್ಯಕ್ಕೆ ಅಪಾಯಕಾರಿಯಾದಂತಹ ಮಾರಕವಸ್ತು ಸಾರಾಯಿಯಲ್ಲಿ ಇರುವ ಬಗ್ಗೆ ಆರೋಗ್ಯ ಖಾತೆಗೆ ತಿಳಿದಿದೆಯೇ ? ಹಾಗಿದ್ದಲ್ಲಿ ಅಂತಹವು ಯಾವುವು ?

ಇ) ಸಾರಾಯಿ ಕುಡಿಯುವುದು ಆರೋಗ್ಯಕ್ಕೆ ಮಾರಕವೇ ಅಥವಾ ಹಿತಕರವೇ ಎನ್ನುವ ಬಗ್ಗೆ ಆರೋಗ್ಯ ಖಾತೆ ಏನು ಅಭಿಪ್ರಾಯ ಕೊಡುತ್ತದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಸಚಿವರು).—

ಅ) ಇಲ್ಲ. ಸಾರಾಯಿಯಲ್ಲಿ ಯಾವ ಪೌಷ್ಟಿಕಾಂಶಗಳೂ ಇರುವುದಿಲ್ಲ.

ಆ) ತಿಳಿದಿದೆ. ಮಿಥೆನಾಲ್, ಕ್ಲೋರಾಲ್, ಹೈಡ್ರೇಟ್, ಫ್ಯೂಸೆಲ್ ಎಣ್ಣೆ ಇವುಗಳ ಕಲಬೆರಕೆಯಿಂದ ಹಾನಿಕಾರ ಉಂಟಾಗುವ ಸಾಧ್ಯತೆ ಇದೆ.

ಇ) ಸಾರಾಯಿ ಕುಡಿತದಿಂದ ಆರೋಗ್ಯ ಕೆಡುತ್ತದೆ ಎಂಬುದು ಕಂಡು ಬಂದಿದೆ.